**IN THE COURT OF THE SENIOR CIVIL JUDGE AND JMFC, TIPTUR.**

**MVC No. 589/2024**

**PW-1**

**Oath is Administered to the witness on 25.06.2025**

**Cross examination by: Sri. B.N.A. Counsel for Respondent**.

ನಾನು ಕೆ ಎಸ್ ಆರ್ ಟಿ ಸಿ ಬಸ್ ನಲ್ಲಿ ಪ್ರಯಾಣ ಮಾಡಿದ್ದೇನೆ. ಆ ಬಸ್ ನಲ್ಲಿ ವೇಗ ನಿಯಂತ್ರಣ ಅಳವಡಿಸಿರುತ್ತಾರೆ ಎಂದರೆ ನಿಜ. ಆ ಕಾರಣದಿಂದ ಆ ಬಸ್ ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಗೊತ್ತಿಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡನಿಗೆ 55 ವರ್ಷ ವಯಸ್ಸಾಗಿತ್ತು. ನಾನು ನನ್ನ ಗಂಡನ ವಯಸ್ಸನ್ನು ತೋರಿಸಲು ಎಸ್ ಆರ್ ಬುಕ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 58 ವರ್ಷ ವಯಸ್ಸಾಗಿತ್ತು ಮತ್ತು ಅವರು ನಿವೃತ್ತಿ ಅಂಚಿನಲ್ಲಿ ಇದ್ದರು ಎಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ಗಂಡನ ಅಜಾಗರೂಕತೆಯಿಂದ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೂ ಸರ್ಕಾರಿ ಬಸ್ ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಬಸ್ ಬರುವುದನ್ನೂ ನೋಡಿದರೂ ಸಹ ತನ್ನ ದ್ವಿಚಕ್ರ ವಾಹನವನ್ನು ಬಸ್ಸನ್ನು ಗಮನಿಸದೇ ಮೊಬೈಲ್ ಫೋನ್ ನಲ್ಲಿ ಮಾತನಾಡಿಕೊಂಡು ಬಲಬದಿಯಿಂದ ಎಡಬದಿಗೆ ದಾಟಲು ಹೋಗಿ ಬಸ್ ಗೆ ಸ್ವತಃ ಗುದ್ದಿ ಅಪಘಾತ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಗಂಡ ಹೆಲ್ಮೆಟ್

ಹಾಕಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮರಣ ಹೊಂದಿದ ಬಳಿಕ ನನಗೆ ಅನುಕಂಪದ ಆಧಾರದ ಮೇಲೆ ಕೆಲಸ ಸಿಕ್ಕಿದೆ ಎಂದರೆ ನಿಜ. ನಿಪಿ-13ರ ವೇತನ ಪಟ್ಟಿಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರಲಿಲ್ಲ. ನಮ್ಮ ಕುಟುಂಬದ ವಂಶವೃಕ್ಷವನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾನು ಮತ್ತು ಇತರೇ ಅರ್ಜಿದಾರರು ಮೃತನ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ.

ಅಪಘಾತವು ನನ್ನ ಗಂಡನ ಅಜಾಗರೂಕತೆಯಿಂದ ಆಗಿರುವ ಕಾರಣ ಎದುರುದಾರ ಕಂಪನಿ ಪರಿಹಾರ ಕೊಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ.

ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪರಿಹಾರ ಪಡೆಯಲು ನಾನು ಅರ್ಹಳಾಗದೇ ಇದ್ದರೂ ಸಹ ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ ಪರಿಹಾರ ಸಿಗುವುದಿಲ್ಲ ಎಂದು ಬಸ್ ಚಾಲಕನ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಸಾವಿಗೂ ಹಾಗೂ ಈ ಅಪಘಾತಕ್ಕೂ ಮತ್ತು ಸದರಿ ಬಸ್ ಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುುವ ಉದ್ದೇಶದಿಂದ ನಾನು ಬಸ್ ಚಾಲಕನ ಮೇಲೆ

ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಬಸ್ ಸೇರಿಸಿ, ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನ ಬಸ್ ಅಪಘಾತದಲ್ಲಿ ಬಾಗಿಯಾಗದೇ ಇರುವ ಕಾರಣ ಎದುರುದಾರ ಕಂಪನಿ ಪರಿಹಾರ ಕೊಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ.

ನನ್ನ ಗಂಡನ ಅಂತ್ಯಕ್ರಿಯೆ 1 ಲಕ್ಷ ಖರ್ಚು ಮಾಡಿದ್ದೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪರಿಹಾರ ಪಡೆಯಲು ನಾನು ಅರ್ಹಳಾಗದೇ ಇದ್ದರೂ ಸಹ ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

**(R.O.A & I.C.)**

Sd/-

**(Mohamed Arifulla C.F)**
SENIOR CIVIL JUDGE JMFC,
TIPTUR